2)

ಅ) ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯ ಮೇಲ್ವಿಚಾರಣೆಯಲ್ಲಿ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.

ಆ) ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾಧಿಕಾರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇನ್ನಿತರ ನಗರ ಪಾಲಿಕೆಗಳ ಆಯುಕ್ತರುಗಳನ್ನು ಪ್ರಧಾನ ಸಮೀಕ್ಷಾಧಿಕಾರಿಗಳನ್ನಾಗಿ ನೇಮಕ ಮಾಡಲಾಗುತ್ತಿದ್ದು ಇವರ ಮೇಲ್ವಿಚಾರಣೆಯಲ್ಲಿ ಸಮೀಕ್ಷೆಯನ್ನು ಮಾಡಲಾಗುತ್ತದೆ.

ಇ) ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರ್ ಹಾಗೂ ಮಹಾನಗರ ಪಾಲಿಕೆಗಳ ಕಂದಾಯಾಧಿಕಾರಿಗಳು ಅಥವಾ ಆಯುಕ್ತರಿಂದ ನಿಯೋಜಿಸಲಾಗುವ ಹಿರಿಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಮನೆ–ಮನೆ ಸಮೀಕ್ಷಾ ಕಾರ್ಯಚರಣೆ ನಡೆಯಲಿದೆ.

3) ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆ 1995ರ ಅನ್ವಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಹಿಂದುಳಿದ ವರ್ಗಗಳ ಆಯೋಗದ ವರದಿಗಳ ಅನುಷ್ಠಾನ

191(306); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಹಿಂದುಳಿದ ವರ್ಗಗಳ ಆಯೋಗದ ವರದಿಗಳ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; ಒಪ್ಪಿಗೆಗಾಗಿ ಬಾಕಿ ಇರುವ ವರದಿಗಳ ವಿವರಗಳೇನು;

ಆ) ಹಿಂದುಳಿದ ವರ್ಗಗಳ ಆಯೋಗದವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಕೆ ಮಾಡಿದ ನಂತರ ಸರ್ಕಾರ ಕೈಗೊಳ್ಳಬೇಕಾದ ಕಾನೂನು ನಿಯಮಗಳ ವಿವರ ಒದಗಿಸುವುದು;

ಇ) ಕಳೆದ ಐದು ವರ್ಷಗಳಲ್ಲಿ ಎಷ್ಟು ಜಾತಿ/ ಸಮುದಾಯಗಳು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗೊಳಿಸುವಂತೆ ಮನವಿ ಮಾಡಿಕೊಂಡಿವೆ; ಇವರುಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕಾಲದಿಂದ ಕಾಲಕ್ಕೆ ಸಲ್ಲಿಸುವ ವರದಿಗಳನ್ನು ಸರ್ಕಾರದ ಹಂತದಲ್ಲಿ ಕೂಲಂಕಷ ಪರಿಶೀಲನೆ ನಡೆಸಿದ ನಂತರ ಅನುಷ್ಠಾನಗೊಳಿಸುವ ಕುರಿತು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಕೆಳಕಂಡ ವರದಿಗಳು ಸರ್ಕಾರದ ಒಪ್ಪಿಗೆಗಾಗಿ ಬಾಕಿ ಇರುತ್ತವೆ.

1. ಶ್ರೀ ಎಸ್. ಸಿದ್ದಗಂಗಯ್ಯನವರ ಅಧ್ಯಕ್ಷತೆಯ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ "ಮಧ್ಯಂತರ ವರದಿ–2005"
2. ಡಾ॥ ಸಿ.ಎಸ್. ದ್ವಾರಕನಾಥ್ ರವರ ಅಧ್ಯಕ್ಷತೆಯ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ "ವಿಶೇಷ ವರದಿ–2010:.
3. ಶ್ರೀ ಎನ್. ಶಂಕ್ರಪ್ಪರವರ ಅಧ್ಯಕ್ಷತೆಯ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ "ಪ್ರಥಮ ವರದಿ–2012" ಮತ್ತು ದ್ವಿತೀಯ ವರದಿ–2013".

ಆ) ಹಿಂದುಳಿದ ವರ್ಗಗಳ ಆಯೋಗದವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಕೆ ಮಾಡಿದ ನಂತರ ಈ ವರದಿಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995ರನ್ವಯ ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತದೆ.

ಇ) 32 ವಿವಿಧ ಜಾತಿ/ಸಮುದಾಯಗಳಿಂದ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗಾಗಿ ಮನವಿಗಳು ಆಯೋಗದಲ್ಲಿ ಸ್ವೀಕೃತವಾಗಿರುತ್ತವೆ. ಇದರಲ್ಲಿ,

ಅ)	ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗೆ ಆಯೋಗದಿಂದ ಸರ್ಕಾರಕ್ಕೆ ಶಿಫಾರಸ್ಸು ಆಗಿರುವ ಪ್ರಕರಣಗಳು i) ಸೇರ್ಪಡೆ ಮಾಡಿ ಸರ್ಕಾರದಿಂದ 01 ಆದೇಶ ಹೊರಡಿಸಿರುವ ಪ್ರಕರಣ ii) ಆಯೋಗದಿಂದ ಸೇರ್ಪಡೆಗೆ 08 ಶಿಫಾರಸ್ಸಾಗಿರುವ ಪ್ರಕರಣಗಳ ಪೈಕಿ, ಸರ್ಕಾರದಿಂದ ಇನ್ನೂ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುವ ಪ್ರಕರಣಗಳು	09
ಆ)	ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡುವ ಬಗ್ಗೆ ಆಯೋಗದಿಂದ ತಿರಸ್ಕರಿಸಲ್ಪಟ್ಟ ಪ್ರಕರಣಗಳು	05
ಇ)	ಸಮೀಕ್ಷೆ ನಂತರ ಸೇರ್ಪಡೆ ಕುರಿತು ಪರಿಶೀಲಿಸಲು ತೀರ್ಮಾನಿಸಿರುವ ಪ್ರಕರಣಗಳು	14
ಈ)	ಆಯೋಗದಲ್ಲಿ ತೀರ್ಮಾನವಾಗದೇ ಬಾಕಿ ಉಳಿದಿರುವ ಪ್ರಕರಣಗಳು	04
	ಒಟ್ಟು	**32**

ಸೇರ್ಪಡೆ ಕುರಿತ 8 ಪ್ರಕರಣಗಳು ಒಳಗೊಂಡಂತೆ ಆಯೋಗದ ವರದಿಗಳ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವ ವಿಷಯವು ಪರಿಶೀಲನೆಯಲ್ಲಿರುತ್ತದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನೂತನ ಬಸ್ಸುಗಳ ಖರೀದಿ

192(307); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸೇರಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕು ವಿಭಾಗಗಳಿಗೆ ನರ್ಮ್ ಯೋಜನೆಯಡಿಯಲ್ಲಿ ಬಸ್ಸುಗಳನ್ನು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಎಷ್ಟು ಬಸ್ಸುಗಳನ್ನು ಖರೀದಿಸಲು ಪ್ರಸ್ತಾಪಿಸಲಾಗಿದೆ;